> ಕನ್ನಡದ ಸಿನಿಮಾಗಳು ಈಗ ದೇಶದ ತುಂಬಾ ಸುದ್ದಿ ಮಾಡ್ತಿವೆ. ನೋಡ್ತಿರಿ, ಇನ್ನು ಮುಂದೆ ಕನ್ನಡ ಕಿರುತೆರೆ ಇಂಡಿಯಾದಲ್ಲೆಲ್ಲ ಸುದ್ದಿ ಮಾಡುತ್ತೆ. ನಮ್ಮ ಚಾನಲ್ ಭಾರತದಲ್ಲೇ ನಂ. 1 ಎಂಟರ್‌ಟೈನ್‌ಮೆಂಟ್ ಚಾನಲ್ ಆಗುತ್ತೆ.
>
> -ಸುದೀಪ್



ಅಲ್ಲ ಎನ್ನುವ ಅಭಿಪ್ರಾಯ ವ್ಯಕ್ತವಾದುದರಿಂದ ಕಾರ್ಯಕ್ರಮ ಮುಂದಕ್ಕೆ ಹೋಗಿದೆ. ವಾಹಿನಿಯ ಆಧಾರಸ್ತಂಭಗಳಲ್ಲಿ ಒಬ್ಬರಾದ ದರ್ಶನ್ ಅವರು ಮಂಡ್ಯ ಲೋಕಸಭಾ ಕ್ಷೇತ್ರದಲ್ಲಿ ಸುಮಲತಾ ಅವರೊಂದಿಗೆ ಚುನಾವಣಾ ಪ್ರಚಾರದಲ್ಲಿ ತೊಡಗಿರುವುದು ಕೂಡ ವಾಹಿನಿಯ ಆರಂಭ ಮುಂದೆ ಹೋಗುವುದಕ್ಕೆ ಪ್ರಮುಖ ಕಾರಣವಾಗಿದೆ.

'ವಾಹಿನಿಯನ್ನು ಆರಂಭಿಸುವುದಕ್ಕೆ ನಮಗೆ ಅವಸರವೇನಿಲ್ಲ. ಬೇರೆ ಭಾಷೆಗಳನ್ನು ಅನುಕರಣೆ ಮಾಡದ, ಕನ್ನಡದ ಸೊಗಡಿನ ಕಾರ್ಯಕ್ರಮಗಳನ್ನು ನಾವು ರೂಪಿಸುತ್ತಿದ್ದೇವೆ. ಈ ಕಾರ್ಯಕ್ರಮಗಳು ಸಾಕಷ್ಟು ಸಾವಧಾನ ಹಾಗೂ ಸಿದ್ಧತೆ ಬಯಸುತ್ತವೆ. ಎಲ್ಲ ಸಿದ್ಧತೆಗಳು ಪೂರ್ಣಗೊಂಡ ನಂತರವೇ ಕನ್ನಡಿಗರ ಮುಂದೆ ದೊಡ್ಡ ಪ್ರಮಾಣದಲ್ಲಿ ಬರಲಿದ್ದೇವೆ. ಬಹುಶಃ ಆ 'ಅಮೃತ ಮುಹೂರ್ತ' ನವೆಂಬರ್ 1ರಂದು ಒದಗಿಬರಬಹುದು' ಎಂದು 'ಸುಧಾ' ಜೊತೆ ಮಾತನಾಡಿದ ಪುನೀತ್ ಹೇಳಿದರು.

ವಾಹಿನಿಯ ಹೆಸರೇನು? ಈಗ ಇರುವ ವಾಹಿನಿಗಳಿಗಿಂತಲೂ ನಿಮ್ಮ ಚಾನಲ್ ಹೇಗೆ ಭಿನ್ನವಾಗಿರುತ್ತದೆ ಎನ್ನುವ ಪ್ರಶ್ನೆಗಳಿಗೆ, 'ಸದ್ಯದಲ್ಲೇ ನಿಮ್ಮೆಲ್ಲ ಪ್ರಶ್ನೆಗಳಿಗೆ ಉತ್ತರ ದೊರೆಯಲಿದೆ' ಎಂದು ಪುನೀತ್ ಮಾತುಮುಗಿಸಿದರು. 'ಎಲ್ಲವೂ ಒಮ್ಮೆಗೇ ಹೇಳಿದರೆ ಹೇಗೆ? ಸ್ವಲ್ಪ ಸಸ್ಪೆನ್ಸ್ ಉಳಿದಿರಲಿ' ಎಂದು ಸುದೀಪ್ ಮಾತು ಫೋನ್ ಕಟ್ ಮಾಡಿದರು.

## ಹೆಸರಿಗಾಗಿ ಕಸರತ್ತು

ಗಾಂಧಿನಗರದ ವಿಶ್ವಸನೀಯ ಮೂಲಗಳ ಪ್ರಕಾರ ಹೊಸ ವಾಹಿನಿಯ ಹೆಸರು ಇನ್ನೂ ಅಂತಿಮಗೊಂಡಿಲ್ಲ. ಮೂವರು ನಾಯಕನಟರ ಹೆಸರುಗಳ ಅಕ್ಷರಗಳನ್ನು ಒಳಗೊಂಡ ಹೆಸರೊಂದನ್ನು ರೂಪಿಸುವ ಜವಾಬ್ದಾರಿಯನ್ನು 'ರಾಜ್‌ಕುಮಾರ' ಚಿತ್ರದ ನಿರ್ದೇಶಕ ಸಂತೋಷ್ ಆನಂದರಾಮ್ ಅವರಿಗೆ ವಹಿಸಿದ್ದಾರೆ ಎನ್ನಲಾಗಿದೆ. ಮೂವರು ಸ್ಟಾರ್‌ಗಳ ಅಭಿಮಾನಿಗಳಿಗೆ ಇಷ್ಟವಾಗುವಂತಹ ಹೆಸರೊಂದರ ಹುಡುಕಾಟದಲ್ಲಿ ಸಂತೋಷ್ ಹಾಗೂ ಅವರ ಬಳಗ ತೊಡಗಿಕೊಂಡಿದ್ದು, ಈ ಬಗ್ಗೆ ಮಾತನಾಡಲು ಪ್ರಯತ್ನಿಸಿದರೆ ಸಂತೋಷ್ ಅವರು ಫೋನ್ ಕರೆ ಸ್ವೀಕರಿಸಲಿಲ್ಲ.

ವಾಹಿನಿಯ ಹೆಸರಿಗೆ ಸಂಬಂಧಿಸಿದಂತೆ ಅಭಿಮಾನಿಗಳ ಸಲಹೆಗಳನ್ನು ಪಡೆಯಲು ಸಂತೋಷ್ ಬಳಗ ಉದ್ದೇಶಿಸಿದೆ. ಶೀರ್ಷಿಕೆ ಸ್ಪರ್ಧೆಯ ಕುರಿತಂತೆ ಸದ್ಯದಲ್ಲೇ ಪ್ರಕಟಣೆಯೊಂದು ಹೊರಬೀಳಲಿದೆ.

## ಮೂವರ ಅಭಿನಯದ ಧಾರಾವಾಹಿ!

ಸುದೀಪ್, ಪುನೀತ್, ದರ್ಶನ್ ಅವರು ಒಟ್ಟಾಗಿ ಅಭಿನಯಿಸಿದ ಧಾರಾವಾಹಿಯೊಂದು ವಾಹಿನಿಯ ಆರಂಭದ ದಿನದಿಂದಲೇ ಪ್ರಸಾರ ಆರಂಬಿಸಲಿದು. ಈ ದಾರಾವಾಹಿ ಕನಡ ಕಿರುತೆರೆ

> ಹೊಸ ಚಾನಲ್‌ನಲ್ಲಿ ನನ್ನ ಹೂಡಿಕೆ ಎಷ್ಟು? ಅದರ ಬಿಜಿನೆಸ್ ಹೇಗೆ? ಇವೆಲ್ಲ ಮಾಹಿತಿ ಕಟ್ಟಿಕೊಂಡು ನೀವು ಏನ್ಮಾಡ್ತೀರಿ? ಈ ವಿಷಯ ತಿಳಕೊಂಡು ಜನ ತಾನೆ ಏನ್ ಉಪಯೋಗ? 'ನಿಮ್ಮ ಆಸ್ತಿ ಪಾಸ್ತಿ ಎಷ್ಟಿದೆ ಅಂತ ತನಿಖೆ ಮಾಡಿಸ್ತೀವಿ' ಅಂತ ಕೆ.ಆರ್. ಪೇಟೆ ಶಾಸಕ ಬೇರೆ ಧಮ್ಕಿ ಹಾಕಿರೋ ಹೊತ್ನಲ್ಲಿ ನೀವು ದುಡ್ಡಿನ ಬಗ್ಗೆ ಮಾತಾಡ್ತಿದ್ದೀರಿ. ಇದು ಸರಿಯಲ್ಲ. ನಾನು ಹೇಳೋದು ಇಷ್ಟೇ, ನಮ್ಮ ಚಾನಲ್ ಮೂಲಕ ಜನರಿಗೆ ಫುಲ್ ಎಂಟರ್‌ಟೈನ್‌ಮೆಂಟ್‌ಗೆ ಮೋಸವಿಲ್ಲ. ಇಷ್ಟು ಸಾಕು ತಾನೆ?
>
> -ದರ್ಶನ್

